# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ.10/2019**

**ದೋ.ಸಾ. : 41 ಫ್ರಾ.ಸಾ. : 33**

| | | |
|---|---|---|
| ಸಾಕ್ಷಿಯ ಹೆಸರು | : | ಪ್ರಶಾಂತ್ ಡಿ. ಸಾವಂತ್ |
| ತಂದೆಯ ಹೆಸರು | : | ದತ್ತಾ ಸಾವಂತ್ |
| ವಯಸ್ಸು | : | 49 ವರ್ಷ |
| ಕೆಲಸ | : | ಎ.ಎಸ್.ಐ., ಡಿ.ಸಿ.ಆರ್.ಬಿ., ಜಿಲ್ಲಾ ಪೊಲೀಸ್ ಕಚೇರಿ, ಕಾರವಾರ |
| ವಾಸ | : | ಕಾರವಾರ |

**ದಿನಾಂಕಃ 19-08-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ:-</u>**

1. 2018 ರಿಂದ 2019 ರವರೆಗೆ ನಾನು ಕಾರವಾರ ನಗರ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿ.23-10-2018 ರಂದು ನಾನು ಠಾಣೆಗೆ ಬಂದಾಗ, ತನಿಖಾಧಿಕಾರಿಯವರು ನನ್ನನ್ನು ತನಿಖಾ ಸಹಾಯಕನಾಗಿ ಹಾಗೂ ಆರೋಪಿಯ ಭದ್ರಿಕೆಗಾಗಿ ನೇಮಿಸಿದ್ದು, ಠಾಣೆಯಲ್ಲಿ ಪೊಲೀಸ್ ಸಿಬ್ಬಂದಿಗಳು, ಪಂಚರು, 2 ಮತ್ತು 3 ನೇ ಆರೋಪಿತರು ಮತ್ತು ಮೃತ ಪ್ರೇಮ್ ಕುಮಾರನ ಸಂಬಂಧಿಕರು ಇದ್ದು, ನಮ್ಮಗಳ ಸಮಕ್ಷಮದಲ್ಲಿ 2 ಮತ್ತು 3 ನೇ ಆರೋಪಿತರು ತನಿಖಾಧಿಕಾರಿಯ ಮುಂದೆ ಸ್ವಖುಷಿ ಹೇಳಿಕೆಯನ್ನು ನೀಡಿದ್ದು, ಸದರಿ ಹೇಳಿಕೆಯಲ್ಲಿ 2 ಮತ್ತು 3 ನೇ ಆರೋಪಿತರು ತಾವು ಪ್ರೇಮ್ ಕುಮಾರನ ಕೊಲೆ ಮಾಡಿದ ಸ್ಥಳ ತೋರಿಸಿರುವುದಾಗಿ ತಿಳಿಸಿದ್ದು, ಅದರಂತೆ ತನಿಖಾಧಿಕಾರಿಯು ನಮ್ಮೆಲ್ಲರನ್ನೂ ಇಲಾಖೆಯ 2-3 ವಾಹನಗಳಲ್ಲಿ ಆರೋಪಿಗಳು ಕರೆದುಕೊಂಡು ಹೋದ ಸ್ಥಳಕ್ಕೆ ಹೋಗಿದ್ದು, ಆರೋಪಿಗಳಿದ್ದ ವಾಹನದಲ್ಲಿ ನಾನೂ ಸಹ ಇದ್ದೆನು. 2 ಮತ್ತು 3 ನೇ ಆರೋಪಿತರು ನಮ್ಮನ್ನು ಸದಾಶಿವಗಡ ಹಾಗೂ ಅಣಶಿ ಮಾರ್ಗವಾಗಿ ಉಳವಿಯ ಆಕಳಗವಿ ಅರಣ್ಯ ಪ್ರದೇಶಕ್ಕೆ ಕರೆದುಕೊಂಡು ಹೋಗಿ, ಆಕಳಗವಿ ಚೆಕ್ ಪೋಸ್ಟ್ ಬಳಿ ವಾಹನವನ್ನು ನಿಲ್ಲಿಸುವಂತೆ ಹೇಳಿದ ಮೇರೆಗೆ, ವಾಹನಗಳನ್ನು ನಿಲ್ಲಿಸಿದ ನಂತರ 2 ಮತ್ತು 3 ನೇ

ಆರೋಪಿಗಳು ವಾಹನದಿಂದ ಕೆಳಗೆ ಇಳಿದು, ನಮ್ಮನ್ನು ಆಕಳಗವಿ ಅರಣ್ಯ ಪ್ರದೇಶಕ್ಕೆ ಕರೆದುಕೊಂಡು ಹೋಗಿ, ಅಲ್ಲಿ ತಾವು ಬೈಕ್ ನಿಲ್ಲಿಸಿದ ಸ್ಥಳ, ಕಣ್ಣಿಗೆ ಬಟ್ಟೆ ಕಟ್ಟಿದ್ದ ಸ್ಥಳ, ಕತ್ತಿಯಿಂದ ಪ್ರೇಮ್ ಕುಮಾರನಿಗೆ ಹಲ್ಲೆ ಮಾಡಿ ಕೊಲೆ ಮಾಡಿದ ಸ್ಥಳ ಹಾಗೂ ಶವ ಬಿದ್ದ ಸ್ಥಳವನ್ನು ತೋರಿಸಿದ್ದು, ಅಲ್ಲಿ ತನಿಖಾಧಿಕಾರಿಯು ಶವ ಪಂಚನಾಮೆ ನಡೆಸಿ, ಆರೋಪಿತರು ತೋರಿಸಿದ ಸ್ಥಳಗಳನ್ನು ಪರಿಶೀಲಿಸಿ, ಸ್ಥಳ ಪಂಚನಾಮೆ ಮಾಡಿ, ನಕಾಶೆಯನ್ನು ತಯಾರಿಸಿ ಫೋಟೋ ತೆಗೆದಿರುತ್ತಾರೆ. ನಾವು ಶವವನ್ನು ನೋಡಿದಾಗ, ಮೈಮೇಲೆ ಕತ್ತಿಯಿಂದ ಕಡಿದ ಗಾಯಗಳು ಆಗಿದ್ದವು ಹಾಗೂ ಮೈಮೇಲೆ ಒಂದು ನಿಕ್ಕರ್ ಇದ್ದು, ಶವದ ಪಕ್ಕದ ಬನಿಯಾನ್ ತುಂಡು ಮತ್ತು ಟೀ-ಶರ್ಟ್ ಬಿದ್ದಿದ್ದು ಹಾಗೂ ಶವ ಸ್ವಲ್ಪ ಕೊಳೆತ ಸ್ಥಿತಿಗೆ ಬಂದಿದ್ದು, ಸ್ಥಳಕ್ಕೆ ಬಂದಿದ್ದ ಮೃತನ ಸಂಬಂಧಿಕರು ಶವವನ್ನು ನೋಡಿ ಗುರುತಿಸಿರುತ್ತಾರೆ.

2. ಆನಂತರ ನಮ್ಮೊಂದಿಗೆ ಬಂದಿದ್ದ ವೈದ್ಯರು ಸ್ಥಳದಲ್ಲಿಯೇ ಶವ ಪರೀಕ್ಷೆಯನ್ನು ನಡೆಸಿರುತ್ತಾರೆ, ಶವ ಪರೀಕ್ಷೆಯ ನಂತರ ತನಿಖಾಧಿಕಾರಿಯು ಶವವನ್ನು ಮೃತನ ಸಂಬಂಧಿಕರಿಗೆ ಹಸ್ತಾಂತರಿಸಿರುತ್ತಾರೆ. ಆನಂತರ ತನಿಖಾಧಿಕಾರಿಯು ಆರೋಪಿತರು ತೋರಿಸಿದ ಕಾರು ನಿಲ್ಲಿಸಿದ ಸ್ಥಳವನ್ನು ಪರಿಶೀಲಿಸಿ, ಪಂಚನಾಮೆಯನ್ನು ಮಾಡಿದರು. ಆ ನಂತರ 2 ಮತ್ತು 3 ನೇ ಆರೋಪಿತರು ನಮ್ಮನ್ನು ಕಾರವಾರದ ಸಿವಿಲ್ ಆಸ್ಪತ್ರೆಗೆ ಕರೆದುಕೊಂಡು ಬಂದು, ಅಲ್ಲಿ ಪ್ರೇಮ್ ಕುಮಾರನು ಮೋಟಾರು ಸೈಕಲ್ ನಿಲ್ಲಿಸಿಟ್ಟ ಸ್ಥಳವನ್ನು ತೋರಿಸಿದ್ದು, ಅಲ್ಲಿಯೂ ಸಹ ತನಿಖಾಧಿಕಾರಿಗಳು ಪಂಚನಾಮೆ ಮಾಡಿ, ಮೋಟಾರು ಸೈಕಲ್ ಜಪ್ತುಪಡಿಸಿಕೊಂಡು ಫೋಟೋ ತೆಗೆದರು. ಆನಂತರ ತನಿಖಾಧಿಕಾರಿಗಳು ಆರೋಪಿತರನ್ನು ಠಾಣೆಗೆ ಕರೆದುಕೊಂಡು ಬಂದರು.

3. ದಿ. 26-10-2018 ರಂದು ಪಿ.ಡಬ್ಲ್ಯುಡಿ. ಇಂಜಿನಿಯರ್ ರವರನ್ನು ಕರೆದುಕೊಂಡು ಹೋಗಿ, ಈ ಪ್ರಕರಣದ ಗುನ್ನಾ ಸ್ಥಳವನ್ನು ತೋರಿಸಿರುತ್ತೇನೆ. ಸದರಿಯವರು ಸ್ಥಳವನ್ನು ಪರಿಶೀಲಿಸಿ, ನಕಾಶೆಯನ್ನು ತಯಾರಿಸಿರುತ್ತಾರೆ. ದಿ.14-11-2018 ರಂದು ತನಿಖಾಧಿಕಾರಿಗಳು ಒಟ್ಟು 14 ವಸ್ತುಗಳನ್ನು ಕಾಗದ ಪತ್ರಗಳೊಂದಿಗೆ ಮಂಗಳೂರಿನ ಆರ್.ಎಫ್.ಎಸ್.ಎಲ್. ಗೆ ತಲುಪಿಸುವಂತೆ ಸೂಚಿಸಿದ ಮೇರೆಗೆ ಮಂಗಳೂರಿಗೆ ಹೋಗಿ ಸದರಿ ವಸ್ತುಗಳನ್ನು ಆರ್.ಎಫ್.ಎಸ್.ಎಲ್. ಗೆ ತಲುಪಿಸಿ, ಸ್ವೀಕೃತಿ ಪಡೆದುಕೊಂಡು ಬಂದು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿರುತ್ತೇನೆ. ಸಾಕ್ಷಿಯು ತಾನು ಪಡೆದುಕೊಂಡು ಬಂದ ಸ್ವೀಕೃತಿ ಪತ್ರ ನಂ. RFSL(Ma)/1955/2018 ವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-

93 ಎಂದು ಗುರುತಿಸಲಾಯಿತು. 1 ರಿಂದ 3 ನೇ ಆರೋಪಿತರು ಪ್ರೇಮ್ ಕುಮಾರನನ್ನು ಕೊಲೆ ಮಾಡಿದ ವಿಷಯ 4 ಮತ್ತು 5 ನೇ ಆರೋಪಿತರಿಗೆ ಗೊತ್ತಿದ್ದರೂ ಸಹ ಪೊಲೀಸರಿಗೆ ತಿಳಿಸದೇ ಹಾಗೂ 1 ನೇ ಆರೋಪಿಯನ್ನು ಗೋವಾಗೆ ಕರೆದುಕೊಂಡು ಹೋಗಿ ಬಿಟ್ಟು ಬಂದು, ಆತನಿಗೆ ತಪ್ಪಿಸಿಕೊಳ್ಳಲು ಸಹಾಯ ಮಾಡಿರುತ್ತಾರೆ. 1 ನೇ ಆರೋಪಿ ಹಾಗೂ ಮೃತ ಪ್ರೇಮ್ ಕುಮಾರನು ಕಾರವಾರದಲ್ಲಿ ಶಿಪ್ಪಿಂಗ್ ವ್ಯವಹಾರವನ್ನು ನಡೆಸುತ್ತಾ ಬಂದಿದ್ದು, ಮೃತ ಪ್ರೇಮ್ ಕುಮಾರನು 1 ನೇ ಆರೋಪಿಗೆ ವ್ಯವಹಾರದಲ್ಲಿ ಅಡ್ಡಿಯಾಗಿದ್ದರಿಂದ, ಆತನ ಮೇಲೆ 1 ನೇ ಆರೋಪಿಯುವ ದ್ವೇಷವನ್ನು ಹೊಂದಿದ್ದು, 2 ಮತ್ತು 3 ನೇ ಆರೋಪಿತರ ಸಹಾಯದಿಂದ ಪ್ರೇಮ್ ಕುಮಾರನನ್ನು ಕೊಲೆ ಮಾಡಿಸಿರುತ್ತಾನೆ ಎಂದು ಗೊತ್ತಾಯಿತು. ಈ ಬಗ್ಗೆ ತನಿಖಾಧಿಕಾರಿಯ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ. ಈಗ ನ್ಯಾಯಾಲಯದ ಮುಂದಿರುವ 1, 2, 4 ಮತ್ತು 5 ನೇ ಆರೋಪಿತರನ್ನು ಮತ್ತು ವಿ.ಸಿಯಲ್ಲಿ ಕಾಣುತ್ತಿರುವ 3 ನೇ ಆರೋಪಿಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

4. ಶವದ ಮೈಮೇಲಿದ್ದ ನಿಕ್ಕರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಓ.10 ಎಂದು ಗುರುತಿಸಲಾಗಿರುತ್ತದೆ. ಶವದ ಪಕ್ಕದಲ್ಲಿ ಬಿದ್ದಿದ್ದ ಬನಿಯಾನ್ ತುಂಡನ್ನು ನೋಡಿ ಗುರತಿಸಿದ್ದು, ಅದನ್ನು ಈಗಾಗಲೇ ಎಂ.ಓ.8 ಎಂದು ಗುರುತಿಸಲಾಗಿರುತ್ತದೆ. ಹರಿದ ಟೀ-ಶರ್ಟ್ ನ್ನು ನೋಡಿ ಗುರತಿಸಿದ್ದು, ಅದನ್ನು ಈಗಾಗಲೇ ಎಂ.ಓ.9 ಎಂದು ಗುರುತಿಸಲಾಗಿರುತ್ತದೆ. ಸ್ಥಳದಲ್ಲಿ ತೆಗೆದ ನಿಪಿ-13, 14, 16, 17, 19, 20, 22, 23, 25, 26, 2 ಮತ್ತು 3 ಫೋಟೊಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ-</u>**

5. 1 ರಿಂದ 3 ನೇ ಆರೋಪಿತರು ಪ್ರೇಮ್ ಕುಮಾರನನ್ನು ಕೊಲೆ ಮಾಡಿದ ವಿಷಯ 4 ಮತ್ತು 5 ನೇ ಆರೋಪಿತರಿಗೆ ಗೊತ್ತಿದ್ದರೂ ಸಹ ಪೊಲೀಸರಿಗೆ ತಿಳಿಸದೇ ಹಾಗೂ 1 ನೇ ಆರೋಪಿಯನ್ನು ಗೋವಾಗೆ ಕರೆದುಕೊಂಡು ಹೋಗಿ ಬಿಟ್ಟು ಬಂದು, ಆತನಿಗೆ ತಪ್ಪಿಸಿಕೊಳ್ಳಲು ಸಹಾಯ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ವಿಷಯ ಗೊತ್ತಿಲ್ಲದೇ ಇದ್ದರೂ ಸಹ, ಗೊತ್ತಿದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ–**

6. ದಿ.23–10–2018 ರಂದು ನಾನು ಪೊಲೀಸ್ ಠಾಣೆಗೆ ಕರ್ತವ್ಯಕ್ಕೆ ಬೆಳಿಗ್ಗೆ 9.00 ಗಂಟೆಗೆ ಬಂದಿರುತ್ತೇನೆ. ಆರೋಪಿತರ ಭದ್ರತೆಗಾಗಿ ಒಂದು ದಿನ ಮಾತ್ರ ಹೋಗಿರುತ್ತೇನೆ. ತನಿಖಾಧಿಕಾರಿಗಳು ನನ್ನನ್ನು ಈ ಪ್ರಕರಣದಲ್ಲಿ ಭದ್ರತೆಗಾಗಿ ನೇಮಿಸಿದ ಬಗ್ಗೆ ಠಾಣೆಯ ರಜಿಸ್ಟರಿನಲ್ಲಿ ನಮೂದಿಸಿರುತ್ತಾರೆ. ಭದ್ರತೆಗಾಗಿ ತನಿಖಾಧಿಕಾರಿಯು ನನ್ನನ್ನು ಹಾಗೂ ನಮ್ಮ ಇತರೇ ಸಿಬ್ಬಂದಿಗಳಾದ ಮಂಜುನಾಥ ಗೊಂಡ, ರಾಜೇಶ ದೇವಾಡಿಗ, ತುಕಾರಾಮ ಬಣಕಾರ್ ಮತ್ತು ವಿ.ಟಿ. ನಾಯಕ್, ಸುರೇಶ ನೆಂಬರ್ಗಿ ರವರನ್ನು ನೇಮಿಸಿರುತ್ತಾರೆ. ನಮ್ಮನ್ನು ನೇಮಕ ಮಾಡಿ, ರಿಜಸ್ಟರಿನಲ್ಲಿ ನಮೂದಿಸಲು ಸುಮಾರು 15–20 ನಿಮಿಷವಾಗಿರುತ್ತದೆ. ಠಾಣೆಗೆ ಬಂದಿದ್ದ ಮೃತ ಪ್ರೇಮ್ ಕುಮಾರನ ಸಂಬಂಧಿಕರ ಹೆಸರು ರಾಜೇಶ, ಆತನ ಹೆಂಡತಿ ಹಾಗೂ ಇತರೇ 3–4 ಜನರು ಇದ್ದರು, ಆದರೆ ಅವರ ಹೆಸರುಗಳು ನನಗೆ ಗೊತ್ತಿಲ್ಲ. 2 ಮತ್ತು 3 ನೇ ಆರೋಪಿತರು ಘಟನಾ ಸ್ಥಳವನ್ನು ತೋರಿಸುತ್ತೇವೆ ಎಂದು ಹೇಳಿದಾಗ, ಸಮಯ ಬೆಳಿಗ್ಗೆ 9.30 ಆಗಿತ್ತು. ಘಟನಾ ಸ್ಥಳಕ್ಕೆ ತೆರಳುವಾಗ ವಾಹನಗಳ ಚಾಲಕರನ್ನು ಬಿಟ್ಟು ನಾವು ಒಟ್ಟು 8 ರಿಂದ 9 ಜನ ಸಿಬ್ಬಂದಿಗಳು ಇದ್ದೆವು. ಆ ಸಮಯದಲ್ಲಿ ಯಾವ ಯಾವ ವಾಹನಗಳಲ್ಲಿ ಯಾವ ಯಾವ ಸಿಬ್ಬಂದಿಗಳು ಇದ್ದರು ಎಂದು ನನಗೆ ಈಗ ಹೇಳಲು ಬರುವುದಿಲ್ಲ. ಘಟನಾ ಸ್ಥಳಕ್ಕೆ ಹೋಗುವಾಗ ಇಲಾಖೆಯ ಎರಡು ಬೊಲೇರೋ ವಾಹನ ಮತ್ತು ಒಂದು ಡಿ.ಆರ್. ವ್ಯಾನ್ ನಲ್ಲಿ ಹೋಗಿದ್ದು, ಘಟನಾ ಸ್ಥಳಕ್ಕೆ ತೆರಳುವಾಗ ನಮ್ಮೊಂದಿಗೆ ಪ್ರೇಮ್ ಕುಮಾರನ ಅಣ್ಣ ರಾಜೇಶ ಮತ್ತು ಅವರ ಹೆಂಡತಿ ಸ್ಥಳಕ್ಕೆ ಬಂದಿದ್ದರು, ಉಳಿದ 2–3 ಸಂಬಂಧಿಕರ ಹೆಸರು ನನಗೆ ಗೊತ್ತಿಲ್ಲ.

7. ಸ್ಥಳಕ್ಕೆ ತರಳುವಾಗ ಆರೋಪಿತರು ಕುಳಿತಿದ್ದ ವ್ಯಾನ್ ಮುಂದುಗಡೆ ಇದ್ದು, ಉಳಿದ ಎಲ್ಲಾ ವಾಹಗಳು ಹಿಂದುಗಡೆ ಇದ್ದವು. ನಾವು ಘಟನಾ ಸ್ಥಳ ತಲುಪಿದಾಗ ಬೆಳಿಗ್ಗೆ 11.00 ಗಂಟೆಯಾಗಿತ್ತು. ಠಾಣೆಯಿಂದ ಘಟನಾ ಸ್ಥಳಕ್ಕೆ ಎಷ್ಟು ಕಿ.ಮೀ ಆಗುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ಆರೋಪಿತರು ಸ್ಥಳ ತೋರಿಸಿದಾಗ ರಾಜೇಶ ದೇವಾಡಿಗ, ಮಂಜುನಾಥ ನಾಯ್ಕ, ಮಂಜು ಗೊಂಡ, ಮುರಳೀಧರ ನಾಯ್ಕ ಮತ್ತು ನಾನು ಹಾಗೂ ತನಿಖಾಧಿಕಾರಿಗಳು ಇದ್ದೆವು. ಪ್ರೇಮ್ ಕುಮಾರನ ಶವವನ್ನು ಆತನ ಅಣ್ಣ ಹಾಗೂ ಆತನ ಹೆಂಡತಿ ಗುರುತಿಸಿರುತ್ತಾರೆ.

ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ